ಎಂ.ವಿ.ಸಿ. ನಂ.461/2022 ರಲ್ಲಿ
ಪಿ.ಡಬ್ಲ್ಯೂ-2(ಡಾ.ವೆಂಕಟ್‌ರಾಮ್ ಕುಮಾರ್)

ದಿನಾಂಕ 27-06-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಹೆಚ್.ಕೆ.ಆರ್., ವಕೀಲರಿಂದಃ-

ಗಾಯಾಳು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ ನಮ್ಮ ಗಮನಕ್ಕೆ ತಂದಿರುತ್ತಾರೆ. ಗಾಯಾಳುವಿಗೆ ಬೇರೆ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಆಗಿದೆಯಾ ಎಂದರೆ ಮಾಹಿತಿ ಇಲ್ಲ. ಗಾಯಾಳು ನಮ್ಮ ಆಸ್ಪತ್ರೆಗೆ ಬರುವ ಮುಂಚೆ ಬೇರೆ ಆಸ್ಪತ್ರೆಗೆ ಹೋಗಿದ್ದರು. ಗಾಯಾಳು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ದಾಖಲೆಗಳನ್ನು ನಾನು ನೋಡಿಲ್ಲ. ಗಾಯಾಳುವಿಗೆ ಮುಖಕ್ಕೆ ಗಾಯ ಆಗಿತ್ತು. ಗಾಯಾಳುವಿಗೆ ನಮ್ಮ ಆಸ್ಪತ್ರೆಯಲ್ಲಿ ಫೇಶಿಯಲ್ ಸರ್ಜನ್‌ರವರೇ ಸರ್ಜರಿ ಮಾಡಿದ್ದಾರೆ. ಅವರ ಹೆಸರು ಡಾ.ಪ್ರಶಾಂತ್. ಅವರು ಈಗ ನಮ್ಮ ಆಸ್ಪತ್ರೆಗೆ ಪ್ರತಿ ಶನಿವಾರ ಬರುತ್ತಾರೆ. ಗಾಯಾಳುವಿಗೆ ಅವರೇ ಶಸ್ತ್ರಚಿಕಿತ್ಸೆ ಮಾಡಿದ್ದು, ಚಿಕಿತ್ಸೆ ಸಹ ನೀಡಿದ್ದಾರೆ. ನಾನು ಗಾಯಾಳುವಿಗೆ ಚಿಕಿತ್ಸೆ ನೀಡಿಲ್ಲ. ಮುಖದ ಗಾಯಕ್ಕೆ ಅಂಗನ್ಯೂನತೆ ಬರುತ್ತದಾ, ಇಲ್ಲವಾ ಎಂದು ಡಾ.ಪ್ರಶಾಂತ್‌ರವರಿಂದ ಲಿಖಿತ ರೂಪದಲ್ಲಿ ಅಭಿಪ್ರಾಯ ಪಡೆದುಕೊಂಡಿಲ್ಲ.

2. ಗಾಯಾಳುವಿಗೆ ಅಂಗನ್ಯೂನತೆ ಅಸ್ಸೆಸ್ ಮಾಡುವಾಗ ಎಕ್ಸರೇ ಮಾಡಿದ್ದೇನೆ, ಎಂ.ಆರ್.ಐ., ಮಾಡಿಲ್ಲ. ಗಾಯಾಳುವಿನ ಫ್ರ್ಯಾಕ್ಚರ್ ಕೂಡಿಕೊಂಡಿದೆ. ಗಾಯಾಳುವಿಗೆ ಡಿಸ್‌ಫಿಗರ್‌ಮೆಂಟ್ ಇಲ್ಲ. ಡಿಸ್‌ಫಿಗರ್‌ಮೆಂಟ್ ಇಲ್ಲದಿರುವಾಗ, ಫೇಶಿಯಲ್ ಇಂಜುರಿ ಆಗಿದ್ದಾಗ ಗಾಯಾಳುವಿನ ವೃತ್ತಿಗೆ ಯಾವುದೇ ತೊಂದರೆ ಆಗುವುದಿಲ್ಲ. ನಾನು

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗಾಯಾಳುವಿಗೆ ಅಂಗನ್ಯೂನತೆ ಹೇಳಲು ಸಕ್ಷಮ ವ್ಯಕ್ತಿ ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.